O.S.No.230.2019 P W - 1

ದಿನಾಂಕ 16.07.2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಆರ್. ಸಿ. ವಕೀಲರಿಂದ :

ನಾನು ಡಿಗ್ರಿ ಪದವೀದರನಾಗಿರುತ್ತೇನೆ. ನಾನು ಬೆಸ್ಕಾಂ ಇಂಜಿನಿಯರ್ ಆಗಿ ನಿವೃತ್ತಿ ಹೊಂದಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಾನು ಬೆಸ್ಕಾಂ ಇಂಜಿನಿಯರ್ ಆಗಿ ನಿವೃತ್ತಿ ಹೊಂದಿರುತ್ತೇನೆ ಎಂಬ ವಿಷಯವನ್ನು ಪ್ರಸ್ತಾಪ ಮಾಡಿರುತ್ತೇನೆ. ನೀವು ದಾವೆಯನ್ನು ಪ್ರತಿವಾದಿಯ ಮೇಲೆ ಯಾವ ಉದ್ದೇಶಕ್ಕಾಗಿ ಹಾಕಿರುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿದಾರರು ಪ್ರತಿವಾದಿಯು ನಮ್ಮ ಭೂಮಿಯಲ್ಲಿ 21 ವರ್ಷದಿಂದ ಸ್ವಾಧೀನದಲ್ಲಿದ್ದಾರೆ , 10 ವರ್ಷ ಭೋಗ್ಯಕ್ಕೆ ಪಡೆದಿದ್ದರು ಅವರನ್ನು ಖಾಲಿ ಮಾಡುವ ಉದ್ದೇಶದಿಂದ ಈ ದಾವೆಯನ್ನು ಹಾಕಿರುತ್ತೇನೆ. ಈ ದಾವೆಯನ್ನು ಸರ್ವೇ ನಂ. 110/1 ರ ಸಂಬಂಧ ಹಾಕಿರುತ್ತೇನೆ. ಸದರಿ ದಾವೆಯನ್ನು 1 ಎಕರೆ 30 ಗುಂಟೆ ಸಂಬಂಧ ಹಾಕಿರುತ್ತೇನೆ. ಸದರಿ ಜಮೀನಿನ ಚಕ್ಕುಬಂಧಿ ನನಗೆ ನೆನಪಿಲ್ಲ , ನನಗೆ ವಯಸ್ಸಾಗಿರುತ್ತದೆ. ಈ ದಾವಾ ಸ್ವತ್ತು ಮೂಲತಃ ಮಹದೇವರಾವ್ ಪೋರ್ಡ್ ರವರು ರವರಿಗೆ ಸೇರಿದ್ದು ಎಂದರೆ ಸರಿ . ಮಹದೇವರಾವ್ ಪೋರ್ಡ್ ರವರು ನಮ್ಮ ದೊಡ್ಡಪ್ಪ ಆಗಿರುತ್ತಾರೆ.

ಮಹದೇವರಾವ್ ಪೋರ್ಡ್ ರವರಿಗೆ ರಾಜಾಬಾಯಿ ರವರು ಹೆಂಡತಿ ಎಂದರೆ ಸರಿ . ಮಹದೇವರಾವ್ ಪೋರ್ಡ್ ರವರಿಗೆ ಒಬ್ಬನೇ ಮಗ , ಆತನ ಹೆಸರು ರಾಮಚಂದ್ರರಾವ್ ಪೋರ್ಡ್ , ಸದರಿ ರಾಮಚಂದ್ರರಾವ್ ಪೋರ್ಡ್ ರವರಿಗೆ ರತ್ನಾಬಾಯಿ ಎಂಬ ಹೆಂಡತಿ ಇದ್ದರು ಎಂದರೆ ಸರಿ . ರಾಮಚಂದ್ರರಾವ್ ಪೋರ್ಡ್ ರವರಿಗೆ 3 ಜನ ಮಕ್ಕಳು. ನಿಮ್ಮ ದೊಡ್ಡಪ್ಪ ಮಹದೇವ ರಾವ್ ಪೋರ್ಡ್ ಯಾವಾಗ ತೀರಿಕೊಂಡರು ಎಂದರೆ ನೆನಪಿಲ್ಲ. ಮಹದೇವ ರಾವ್ ಪೋರ್ಡ್ ರವರು ತೀರಿಕೊಂಡ ನಂತರ ಅವರ ಹೆಂಡತಿ , ಸೊಸೆ ಮತ್ತು ಮೊಮ್ಮಕ್ಕಳು ಸ್ವಾಧೀನಾನುಭವದಲ್ಲಿ ಇದ್ದರು ಎಂದರೆ ಸರಿಯಲ್ಲ. ಸ್ವಾಧೀನಾನುಭವದಲ್ಲಿ ಇದ್ದರೂ ಸುಳುಳ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ, ರಾಜಾಬಾಯಿ ಮಾತ್ರ

ಸ್ವಾಧೀನಾನುಭವದಲ್ಲಿ ಇದ್ದರು ಎಂದು ನುಡಿಯುತ್ತಾರೆ. ಮಹದೇವ ರಾವ್ ಪೋರ್ಡ್ ರವರು ತೀರಿಕೊಂಡ ಮೆಲೆ ಸದರಿ ಸ್ವತ್ತು ಅವರ ಹೆಂಡತಿ , ಸೊಸೆ , ಹಾಗೂ ಮೊಮ್ಮಕ್ಕಳಿಗೆ ಸೇರಿತ್ತು ಎಂದರೆ , ರಾಜಾಬಾಯಿ ರವರು ಮಾತ್ರ ಸ್ವಾಧೀನದಲ್ಲಿದ್ದರು. ರಾಜಾಬಾಯಿಯವರು ದಾವಾ ಸ್ವತ್ತನ್ನು ನನ್ನ ಹೆಸರಿಗೆ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಮಹದೇವ ರಾವ್ ಪೋರ್ಡ್ ರವರು ತೀರಿಕೊಂಡ ನಂತರ ಅವರ ಹೆಂಡತಿ ರಾಜಾಬಾಯಿ , ಸೊಸೆ ರತ್ನಾಬಾಯಿ ಮತ್ತು ಮಕ್ಕಳು ಸ್ವತ್ತನ್ನು ವಿಭಾಗ ಮಾಡಿಕೊಂಡಿರುತ್ತಾರಾ ಎಂದರೆ ಸಾಕ್ಷಿದಾರರು ಹೌದು , ಸೊಸೆಗೆ ಸರ್ವೆ ನಂ. 116 ರಲ್ಲಿ 3 ಎಕರೆ ಹಾಗೂ ಉಳಿದ 1 ಎಕರೆ 33 ಗುಂಟೆ ನನ್ನ ಹೆಸರಿಗೆ ಕ್ರಯ ಪತ್ರ ಮಾಡಿಕೊಟ್ಟಿರುವುದಾಗಿ ನುಡಿಯುತ್ತಾರೆ.

ರಾಜಾಬಾಯಿ ಅವರ ಸೊಸೆ ರತ್ನಾಬಾಯಿ ವಿಭಾಗ ಆಗಿರುವ ಸಂಬಂಧ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ವಿಲ್ ಮೂಲಕ ರತ್ನಾಬಾಯಿಗೆ ಸ್ವತ್ತನ್ನು ನೀಡಿರುತ್ತಾರೆ , ನನಗೆ ಕ್ರಯ ಪತ್ರದ ಆಧಾರದ ಮೇಲೆ ದಾವಾ ಸ್ವತ್ತನ್ನು ನೀಡಿರುವುದಾಗಿ ನುಡಿಯುತ್ತಾರೆ. ವಿಲ್ 2006 ರಲ್ಲಿ ಆಗಿರುತ್ತದೆ. ರಾಜಾಬಾಯಿ 2006 ರಲ್ಲಿ ತೀರಿಕೊಂಡಿರುತ್ತಾರೆ. ಸರ್ವೆ ನಂ. 116 ರಲ್ಲಿ 3 ಎಕರೆ ರತ್ನಾಬಾಯಿಗೆ ಕೊಟ್ಟಿರುವ ಬಗ್ಗೆ ಖಾತೆ ಪಹಣಿ ಆಗಿರುವ ಸಂಬಂಧ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿದಾರರು ಇಲ್ಲ ಎಂದು ನುಡಿಯುತ್ತಾರೆ. ಮಹದೇವರಾವ್ ಪೋರ್ಡ್ ರವರ ಹೆಸರಿನಲ್ಲಿದ್ದ ಆಸ್ತಿ ಅವರು ತೀರಿಕೊಂಡ ನಂತರ ಯಾವುದೇ ರೀತಿಯಲ್ಲಿ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ರಾಜಾಬಾಯಿ ರವರಿಗೆ ಈ ದಾವಾ ಆಸ್ತಿ ವಿಭಾಗದಿಂದ ಬಂದಿದೆ ಎಂದು ಸಾಬೀತುಪಡಿಸುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿದಾರರು ಹೌದು ಎಂದು ನುಡಿಯುತ್ತಾರೆ. ರಾಜಾಬಾಯಿಯವರಿಗೆ ಮಾತ್ರ ದಾವಾ ಸ್ವತ್ತನ್ನು ಮಾರಾಟ ಮಾಡುವ ಹಕ್ಕು ಇರಲಿಲ್ಲ , ನೀವು ದಾಖಲೆಯನ್ನು ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ.

ಪ್ರತಿವಾದಿಗೆ ದಾವಾ ಸ್ವತ್ತು 2004 ರಲ್ಲಿ ಭೋಗ್ಯಕ್ಕೆ ನೀಡಲಾಗಿದೆ. ನಾನು 2006 ರಲ್ಲಿ ದಾವಾ ಸ್ವತ್ತನ್ನು ಕ್ರಯ ಪತ್ರದ ಮೂಲಕ ಖರೀದಿ ಮಾಡಿರುತ್ತೇನೆ. ರಾಜಾಬಾಯಿಯಿಂದ ಖರೀದಿ ಮಾಡಿದ ಸಂದರ್ಭದಲ್ಲಿ ಅವರ ಸೊಸೆಯ ಕಡೆಯಿಂದ

ಕ್ರಯ ಪತ್ರಕ್ಕೆ ಸಹಿ ಪಡೆದಿರುವುದಿಲ್ಲ ಎಂದೆರ ಸರಿ. ರಾಜಾಬಾಯಿಯರಿಂದ ದಾವಾ ಸ್ವತ್ತನ್ನು ಖರೀದಿಸುವ ಸಂದರ್ಬದಲ್ಲಿ ಅವರಿಗೆ 85 ವರ್ಷ ವಾಗಿತ್ತು. ರಾಜಾಬಾಯಿಂದ ದಾವಾ ಸ್ವತ್ತು ಖರೀದಿ ಮಾಡುವ ಸಮಯದಲ್ಲಿ ಅವರಿಗೆ 90 ವರ್ಷ ವಯಸ್ಸಾಗಿತ್ತು ಎಂದರೆ ಸರಿಯಲ್ಲ. 2006 ರಲ್ಲಿ ರಾಜಾಬಾಯಿಯವರಿಗೆ ವಯಸ್ಸಾಗಿದ್ದು , ಖಾಯಿಲೆಯಿದ್ದು ಓಡಾಡಲು ಸಹ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ.

ರಾಜಾಬಾಯಿ ಮತ್ತು ಅವರ ಸೊಸೆ ರತ್ನಾಬಾಯಿಯರಿಗೆ ಒಬ್ಬರಿಗೊಬ್ಬರಿಗೆ ಆಗದ ಕಾರಣ, ರಾಜಾಬಾಯಿ ಯವರು ಅವರ ಮನೆ ಬಿಟ್ಟು ನಿಮ್ಮ ಮನೆ ಸೇರಿದ್ದರು ಎಂದರೆ ಸರಿ . ಅವರ ಸಹೋದರ ಸೋನಾಬಾಯಿ ಸಹ ಜೊತೆಯಲ್ಲಿದ್ದರು ಎಂದರೆ ಸರಿ . ಆಗಾಗಿ ನೀವು ರಾಜಾಬಾಯಿ ಯಾವುದೇ ಪತ್ರವನ್ನು ಬರೆದುಕೊಡದೇ ಇದ್ದರೂ ನೀವಾಗಿಯೇ ಸದರಿ ಕ್ರಯ ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ರಾಜಾಬಾಯಿಯವರಿಗೆ ಯಾವುದೇ ಕ್ರಯದ ಹಣವನ್ನು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿದಾರರು 2 ಲಕ್ಷ ಹಣವನ್ನು ನೀಡಿಯೇ ದಾವಾ ಸ್ವತ್ತನ್ನು ಖರೀದಿ ಮಾಡಿರುವುದಾಗಿ ನುಡಿಯುತ್ತಾರೆ. ರಾಜಾಬಾಯಿಯವರಿಂದ ದಾವಾ ಸ್ವತ್ತನ್ನು ಖರೀದಿ ಮಾಡುವಾಗ ಕ್ರಯ ಪತ್ರದಲ್ಲಿ ಎಷ್ಟು ಹಣಕ್ಕೆ ಖರೀದಿ ಮಾಡಿರುತ್ತೀರಿ ಎಂದು ತೋರಿಸಿರುತ್ತೀರಿ ಎಂಬ ಹೇಳಿಕೆಗೆ ಸಾಕ್ಷಿದಾರರು 2 ಲಕ್ಷ ಕ್ಕೆ ಎಂದು ನುಡಿಯುತ್ತಾರೆ. ನಾನು ರಾಜಾಬಾಯಿ 2 ಲಕ್ಷ ಹಣವನ್ನು ಕೊಟ್ಟ್ರಿರುತ್ತೇನೆ. ರಾಜಾಬಾಯಿಯವರು ನಿಮಗೆ ಈ ಸ್ವತ್ತನ್ನು 2 ಲಕ್ಷ ಕ್ಕೆ ಕೊಡಲು ಒಪ್ಪಿರಲಿಲ್ಲ , ಹಾಗೂ ನಿಮಗೆ ದಾವಾ ಸ್ವತ್ತನ್ನು 2 ಲಕ್ಷಕ್ಕೆ ಮಾರಾಟ ಮಾಡಿರುವುದಿಲ್ಲ , ಸುಳ್ಳು ಹೇಳುತ್ತೀದ್ದೀರಿ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಅಕ್ಕ ಪಕ್ಕ ನಿಮಗೆ ಸೇರಿರುವ ಬೇರೆ ಸ್ವತ್ತು ಇದೆ ಎಂದರೆ ಸರಿ . ಆ ಕಾರಣಕ್ಕಾಗಿ ರಾಜಾಬಾಯಿಯನ್ನು ನಿಮ್ಮ ಮನೆಯಲ್ಲಿ ಇಟ್ಟುಕೊಂಡು ದಾವಾ ಸ್ವತ್ತನ್ನು ಕಬಳಿಸಲು ಈ ಸುಳ್ಳು ದಾವೆ ಹಾಕಿರುತ್ತೀರಿ ಎಂದರೆ ಸರಿಯಲ್ಲ. ರತ್ನಾಬಾಯಿಯವರು O.S. 149/2012 ರಡಿಯಲ್ಲಿ ನಿಮ್ಮ ವಿರುದ್ದ. ದಾವೆ ಹಾಕಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ರತ್ನಾಬಾಯಿಯವರಂತೆ ತೀರ್ಪು ಆಗಿತ್ತು ಎಂದರೆ ಸರಿಯಲ್ಲ. ಸದರಿ ದಾವೆಯ ತೀರ್ಪನ್ನು ಪ್ರಶ್ನಿಸಿ ನೀವು ಮೇಲ್ಮನವಿ

ಸಲ್ಲಿಸಿದ್ದೀರಿ ಎಂದರೆ ಸರಿ . ಸದರಿ ದಾವೆಯಲ್ಲಿ ದಾವಾ ಸ್ವತ್ತು ಪೂರ್ತಿ ನನ್ನ ಹೆಸರಿಗೆ ಬರಬೇಕೆಂದು ಕೇಳಿ ಮೇಲ್ಮನವಿ ಸಲ್ಲಿಸಿದ್ದೇನೆ. ಸದರಿ ಮೇಲ್ಮನವಿಯಲ್ಲಿ ನ್ಯಾಯಾಲಯವು ಪುನಃ ತೀರ್ಮಾನ ಮಾಡಲು ದಾವೆಯನ್ನು ಕೆಳ ನ್ಯಾಯಾಲಯಕ್ಕೆ ಸಲ್ಲಿಸಿರುತ್ತದೆ ಎಂದರೆ ಸರಿಯಲ್ಲ. ಸದರಿ ದಾವೆ ರತ್ನಾಬಾಯಿಯವರ ವಿರುದ್ಧ ಆಗಿತ್ತು ಎಂದರೆ ಸರಿ . ನ್ಯಾಯಾಲಯದ ಆದೇಶ ಮೇರೆಗೆ RA 25/2020 ರಡಿಯಲ್ಲಿ ಈಗಲೂ ಸಹ ದಾವೆ ನಡೆಯುತ್ತಿದೆ ಎಂದರೆ ಸರಿ . ಸದರಿ ದಾವೆ ಪುನಃ RA 5024/2023 ಎಂದು ರೀ ನಂಬರ್ ನೀಡಲಾಗಿದೆ ಎಂದರೆ ಸರಿ . ದಾವಾ ಸ್ವತ್ತಿನಲ್ಲಿ ನಿಮಗೆ ಸಂಪೂರ್ಣವಾಗಿ ಅಧಿಕಾರ ಇಲ್ಲದೇ ಇರುವ ಕಾರಣ ಪ್ರತಿವಾದಿಗ ವಿರುದ್ಧ ನೀವು ದಾವೆ ಹಾಕಲು ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಪ್ರತಿವಾದಿ ಭೋಗ್ಯ ಬಿಡುಗಡೆ ಮಾಡಿಕೊಡಲು ಬಾಧ್ಯಸ್ಥನಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ರತ್ನಾಬಾಯಿಯವರಿಗೆ ಸೇರಿದ ಆಸ್ತಿ ಆಗಿದೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಮುಗಿಯಿತು.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ